<u>ದಿಃ 08.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲುಃ ಶ್ರೀ ಸಿ.ವಿ.ಕೆ., ಪ್ರತಿವಾದಿ ಪರ ವಕೀಲರಿಂದಃ</u>

7. ನಾನು ಚಿಕ್ಕ ಮಗು ಆಗಿದ್ದ ಕಾಲದಿಂದ ನಿ.ಪಿ-43 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಕಂಡುಬರುವ ವಿಳಾಸದಲ್ಲಿ ವಾಸವಾಗಿದ್ದೇನೆ. ನನಗೆ ಮದುವೆಯಾಗಿದ್ದು, ನನಗೆ ಇಬ್ಬರು ಮಕ್ಕಳು ಇದ್ದಾರೆ. ನಾನು ನನ್ನ ಗಂಡ ಮತ್ತು ಮಕ್ಕಳ ಜೊತೆ ನಿ.ಪಿ-43 ರಲ್ಲಿ ಕಂಡುಬರುವ ವಿಳಾಸದಲ್ಲಿಯೆ ವಾಸವಾಗಿದ್ದೇನೆ.

8. ನನ್ನ ತಾಯಿ ಮಾರಮ್ಮನವರಿಗೆ ನಾನು ಸೇರಿದಂತೆ ಇಬ್ಬರು ಹೆಣ್ಣುಮಕ್ಕಳು. ನನ್ನ ತಂಗಿ ನೇತ್ರಾವತಿಯವರಿಗೆ ಕೂಡ ಮದುವೆಯಾಗಿದೆ. ಆಕೆಗೆ ಒಬ್ಬ ಮಗಳು ಇದ್ದಾರೆ. ನನ್ನ ತಂಗಿ, ಆಕೆಯ ಗಂಡ ಮತ್ತು ಮಗಳು ಸಹ ನಮ್ಮ ಜೊತೆಯಲ್ಲಿ ನಿ.ಪಿ-43 ರಲ್ಲಿ ಕಂಡುಬರುವ ವಿಳಾಸದಲ್ಲಿ ವಾಸವಾಗಿದ್ದಾರೆ.

9. ನನ್ನ ತಂದೆ ಮೊದಲು ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು. ಈಗ ಅವರು ಏನೂ ಕೆಲಸ ಮಾಡುತ್ತಿಲ್ಲ, ಅವರು ಆರೋಗ್ಯವಾಗಿದ್ದಾರೆ. ಆದರೆ ಅವರಿಗೆ ಕಣ್ಣು ಕಾಣಿಸುವುದಿಲ್ಲ. ಈಗ ಅವರು ಮನೆಯಲ್ಲಿ ಇದ್ದಾರೆ.

10. ಹಿಂದೆ ನನ್ನ ತಾಯಿ ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಒಂದು ದಾವಾ ಸಲ್ಲಿಸಿದ್ದರು ಮತ್ತು ನನ್ನ ತಾಯಿಯವರು ಸದರಿ ದಾವಾವನ್ನು ಸ್ವತಃ ನಡೆಸುತ್ತಿದ್ದರು ಎಂದರೆ ನಿಜ. ನಿ.ಪಿ-1 ರ ದಾಖಲೆಗೆ ಪೂರಕವಾಗಿ ನನ್ನ ತಾಯಿಯವರ ಅನಾರೋಗ್ಯಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಾಯಿಯವರು ಈ ನ್ಯಾಯಾಲಯದ ಬಳಿ ಬಂದು ನಿ.ಪಿ-1 ರಲ್ಲಿ ಗುರುತಿಸಿರುವ ದಾಖಲೆಯನ್ನು ಮಾಡಿಕೊಟ್ಟಿದ್ದರು. ಆ ಸಂದರ್ಭದಲ್ಲಿ ನನ್ನ ತಾಯಿಯವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ.

11. ನನ್ನ ತಂದೆ ತಾಯಿಯವರು ದಾವಾ "ಎ" ಸ್ವತ್ತಿನಲ್ಲಿ 25-30 ವರ್ಷಗಳ ಹಿಂದೆ ಗುಡಿಸಲು ಹಾಕಿಕೊಂಡು ಇದ್ದರು. ಆ ಸ್ವತ್ತು ಅವರಿಗೆ ಸರ್ಕಾರದಿಂದ ಬಂದಿತ್ತು. ಆ ಬಗ್ಗೆ ನಾನು ನಿ.ಪಿ-2 ರಲ್ಲಿ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ನಿ.ಪಿ-2 ರಲ್ಲಿ ನಿವೇಶನ ಸಂಖ್ಯೆ 120 ಎನ್ನುವ ನಮೂದು ಇಲ್ಲ ಎಂದರೆ ನಿಜ. 23 ಅಡಿ x 46 ಅಡಿ ವಿಸ್ತೀರ್ಣದ ಜಾಗದಲ್ಲಿ ನಾವು ಗುಡಿಸಲು ಹಾಕಿಕೊಂಡಿದ್ದೆವು. ಸದರಿ ಜಾಗದಲ್ಲಿ ನಾವು 23 x 46 ಅಡಿ ವಿಸ್ತೀರ್ಣದ ಜಾಗದಲ್ಲಿ ಗುಡಿಸಲು ಹಾಕಿಕೊಂಡಿದ್ದೆವು ಎಂದು ತೋರಿಸುವ ಬಗ್ಗೆ ಈ ದಾವಾದಲ್ಲಿ ಫೋಟೋವನ್ನು ಹಾಜರುಪಡಿಸಿಲ್ಲ.

12. ನಿ.ಪಿ-2 ರಲ್ಲಿ ಗುರುತಿಸಿರುವ ದಾಖಲೆಯನ್ನು 2004-05 ರಲ್ಲಿ ನೀಡಲಾಗಿತ್ತು. ಈ ದಾಖಲೆಯನ್ನು ನಾವು ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಈ ದಾಖಲೆಯನ್ನು ಸದರಿ ದಾವಾದಲ್ಲಿ ಹಾಜರುಪಡಿಸದೇ ಇದ್ದ ಕಾರಣದಿಂದ ಆ ದಾವಾ ವಜಾಗೊಂಡಿದೆ ಎಂದರೆ ಸರಿಯಲ್ಲ.

13. ನಿ.ಪಿ-3 ರಲ್ಲಿ ಗುರುತಿಸಿರುವ ದಾಖಲೆಯನ್ನು ನಾನು ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ. ಈ ದಾಖಲೆಯನ್ನು ಸಹ ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ನಾವು ನಿ.ಪಿ-4 ರ ದಾಖಲೆಯಂತೆ ಕೆ.ಆರ್.ಪುರಂ ತಹಸೀಲ್ದಾರ್ ಕಚೇರಿ ಪಕ್ಕದಲ್ಲಿನ ಎಸ್.ಬಿ.ಐ ಬ್ಯಾಂಕಿನಲ್ಲಿ ಹಣ ಪಾವತಿ ಮಾಡಿರುತ್ತೇವೆ. ಅದರಂತೆ ಹಣ ಪಾವತಿ ಆದ ಬಗ್ಗೆ ಬ್ಯಾಂಕಿನವರು ನಿ.ಪಿ-4 ರಲ್ಲಿ ಅವರ ಮೊಹರು ಮತ್ತು ಸಹಿ ಮಾಡಿಕೊಟ್ಟಿದ್ದಾರೆ.

14. ನಿ.ಪಿ-5 ರಲ್ಲಿ ನಿವೇಶನ ಸಂಖ್ಯೆ 120 ಎನ್ನುವ ನಮೂದು ಇಲ್ಲ. ನಾವು 2013 ರಲ್ಲಿ ನಮ್ಮ ತಾಯಿ ಹೆಸರಿಗೆ ಖಾತೆ ಮಾಡುವ ಬಗ್ಗೆ ಬಿಬಿಎಂಪಿ ಗೆ ಅರ್ಜಿ ಸಲ್ಲಿಸಿದ್ದೆವು. ನಿ.ಪಿ-8 ರಲ್ಲಿ ಸಂಬಂಧಿತ ಸ್ವತ್ತಿನಲ್ಲಿ ಮನೆ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ-9 ರಲ್ಲಿ 2002-03 ಎನ್ನುವ ನಮೂದನ್ನು ತಿದ್ದುಪಡಿ ಮಾಡಿ ಬರೆಯಲಾಗಿದೆ ಎಂದರೆ ಬಿಬಿಎಂಪಿ ಅಧಿಕಾರಿಗಳೆ ತಿದ್ದುಪಡಿ ಮಾಡಿದ್ದಾರೆ. ಈ ದಾಖಲೆಯಂತೆ 2002-03 ರಿಂದ 2013-14 ರ ಅವಧಿಗೆ ಸೇರಿದಂತೆ ಒಟ್ಟು ತೆರಿಗೆ ರೂ.17,555/- ಎಂದು ನಮೂದಿಸಲಾಗಿದೆ ಎಂದರೆ ನಿಜ. ನಾವು ಈ ದಾಖಲೆಯನ್ನು ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಹಾಜರುಪಡಿಸಿಲ್ಲ

ಎಂದರೆ ಸರಿಯಲ್ಲ. ನಿ.ಪಿ-10ರಂತೆ ನಾವು ಒಟ್ಟು ರೂ.14,187/- ಹಣವನ್ನು ಪಾವತಿಸಿದ್ದೇವೆ ಎಂದರೆ ನಿಜ. ನಿ.ಪಿ-11 ರಿಂದ ನಿ.ಪಿ-16ರಲ್ಲಿ ಗುರುತಿಸಿರುವ ದಾಖಲೆಗಳಿಗೆ ಸಂಬಂಧಿಸಿದಂತೆ ನಾವು ಎಲ್ಲಾ ತೆರಿಗೆಯನ್ನು 12.12.2013 ರಂದು ಪಾವತಿಸಿದ್ದೇವೆ ಎಂದರೆ ನಿಜ. ಈ ದಾಖಲೆಗಳಲ್ಲಿ ಸಂಬಂಧಿತ ಸ್ವತ್ತಿನ ಪಿಐಡಿ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರಿದು ಈಗ ಸಂಬಂಧಿತ ಸ್ವತ್ತಿಗೆ ಪಿಐಡಿ ಸಂಖ್ಯೆ ಇದೆ ಎಂದು ನುಡಿದಿರುತ್ತಾರೆ.

15. ನಿ.ಪಿ-24ರಲ್ಲಿ ಗುರುತಿಸಿರುವ ದಾಖಲೆಯು ನಮ್ಮ ಮನೆಯ ಬಳಿ ನಡೆದಿದ್ದ ಗಲಾಟೆಗೆ ಸಂಬಂಧಿಸಿದಂತೆ ನೀಡಿದ್ದ ದೂರು ಆಗಿದೆ. ನಿ.ಪಿ-25ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಅದನ್ನು ನೀಡಲಾದ ದಿನಾಂಕದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ.

16. ಪ್ರತಿವಾದಿಯು ನನ್ನ ತಾಯಿಯ ಅಣ್ಣ. ಪ್ರತಿವಾದಿಯು ನಮಗೆ ಸೇರಿದ ಜಾಗದಲ್ಲಿ ಇದ್ದಾರೆ ಮತ್ತು ಅದನ್ನು ಖಾಲಿ ಮಾಡಿಕೊಡುವಂತೆ ಅಸಲು ದಾವಾ ಸಂಖ್ಯೆ 4003/2014 ಅನ್ನು ಸಲ್ಲಿಸಲಾಗಿತ್ತು. ಆ ದಾವಾ ವಜಾ ಆಗಿದೆ ಎಂದರೆ ನಿಜ. ನನ್ನ ತಾಯಿ ಹೆಸರಿಗೆ ಕ್ರಯಪತ್ರ ಆದ ಬಳಿಕ 2014ರ ನಂತರದಲ್ಲಿ ನನ್ನ ತಾಯಿ ಹೆಸರಿಗೆ ವಿದ್ಯುತ್ ಸಂಪರ್ಕದ ದಾಖಲೆಯನ್ನು ಮಾಡುವ ಕುರಿತಂತೆ ನಾವು ಅರ್ಜಿ ಸಲ್ಲಿಸಿದ್ದ ಮೇರೆಗೆ ನಿ.ಪಿ-28ರಂತೆ ದಾಖಲೆಯನ್ನು ನೀಡಿದ್ದರು. 2014ರ ಪೂರ್ವದಲ್ಲಿ ಸಂಬಂಧಿತ ವಿದ್ಯುತ್ ಸಂಪರ್ಕವು ಪ್ರತಿವಾದಿಯವರ ಹೆಸರಿನಲ್ಲಿತ್ತು. ಅಲ್ಲಿ ಪ್ರತಿವಾದಿಗೆ ಸೇರಿದ ಮನೆ ಇದ್ದಿರಲಿಲ್ಲ. ಅವರು ನಮಗೆ ಸೇರಿದ ಮನೆಯಲ್ಲಿ ವಾಸ ಇದ್ದರು. ಪ್ರತಿವಾದಿಯು ನಮಗೆ ಸೇರಿದ ಮನೆಯಲ್ಲಿ ಇದ್ದ ಕುರಿತಂತೆ ತಿಂಗಳಿಗೆ ರೂ.500/- ಬಾಡಿಗೆ ಕೊಡುತ್ತಿದ್ದರು. ಆ ಬಗ್ಗೆ ನಮ್ಮ ಬಳಿ ಬಾಡಿಗೆ ಕರಾರು ಇಲ್ಲ. ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಪ್ರತಿವಾದಿಯು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ವಿಚಾರವನ್ನು ಹೇಳಿದ್ದೆವು. ಆ ಮನೆಯಲ್ಲಿ ನಾವು ವಾಸ ಇದ್ದಿರಲಿಲ್ಲ ಎಂದರೆ ನಾವು ಕೂಡ ಅಲ್ಲಿಯೇ ವಾಸ ಇದ್ದೆವು. ಸದರಿ ಮನೆಯಲ್ಲಿ ಪ್ರತಿವಾದಿಯು ಅವರ ಸಂಸಾರದೊಂದಿಗೆ ನಮ್ಮೆಲ್ಲರ ಜೊತೆಯಲ್ಲಿ

ವಾಸ ಇದ್ದರು. ಪ್ರತಿವಾದಿ ಮತ್ತು ಅವರ ಸಂಸಾರ ನಮ್ಮ ಜೊತೆಯಲ್ಲಿಯೇ ವಾಸವಿದ್ದರು ಎಂದು ನಾವು ಈ ದಾವಾದಲ್ಲಿ ಅಥವಾ ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

17. ನಾವು ಗುಡಿಸಲು ಹಾಕಿಕೊಂಡಿದ್ದ ಕಾವೇರಿನಗರದಲ್ಲಿನ ಸರ್ವೆ ನಂಃ 30 ರ ಜಮೀನು ಸರ್ಕಾರಿ ಜಮೀನು ಆಗಿತ್ತು ಎಂದರೆ ನಿಜ. ಸದರಿ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡ ಬಳಿಕ ನಾವು ಅದರ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಬೇಕಿತ್ತು ಎಂದರೆ ನಿಜ. ಸಾಕ್ಷಿಯು ಮುಂದುವರಿದು ತಾವು ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದುದಾಗಿ ನುಡಿದಿರುತ್ತಾರೆ. ನಾವು ಮಂಜೂರಾತಿಗಾಗಿ ಅರ್ಜಿ ಸಲ್ಲಸಿದ ಸಂದರ್ಭದಲ್ಲಿ ಆ ಗುಡಿಸಲಿನಲ್ಲಿ ನಾವು ಒಟ್ಟು ಎಷ್ಟು ಜನ ವಾಸವಾಗಿದ್ದೇವೆ ಎನ್ನುವ ಬಗ್ಗೆ ನಮೂದಿಸಿರಲಿಲ್ಲ. ಸದರಿ ಗುಡಿಸಲಿನಲ್ಲಿ ವಿದ್ಯುತ್ ಸಂಪರ್ಕ ಇತ್ತು. ಆದರೆ ನೀರಿನ ಸಂಪರ್ಕ ಮತ್ತು ಶೌಚಾಲಯದ ವ್ಯವಸ್ಥೆ ಇದ್ದಿರಲಿಲ್ಲ.

18. ನನ್ನ ತಾಯಿಯವರು ಗುಡಿಸಲಿಗೆ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದರು. ನನ್ನ ತಾಯಿಯವರು ಸಲ್ಲಿಸಿದ್ದ ಸದರಿ ಅರ್ಜಿಯ ನಕಲನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಾವು ನಿ.ಪಿ-28 ರಿಂದ ನಿ.ಪಿ-31 ರಲ್ಲಿ ಗುರುತಿಸಿರುವ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

19. ನಿ.ಪಿ-32 ರಲ್ಲಿ ನಿವೇಶನ ಸಂಖ್ಯೆ 120 ಎನ್ನುವ ಬಗ್ಗೆ ನಮೂದು ಇಲ್ಲ. ನಾವು ಈ ಅರ್ಜಿಯನ್ನು 2015 ರಲ್ಲಿ ಸಲ್ಲಿಸಿದ್ದೆವು. ಈ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ಸಂಬಂಧಿತ ಸ್ವತ್ತಿನಲ್ಲಿ ಗುಡಿಸಲು ಇತ್ತು. ಅದರಂತೆ ನಮ್ಮ ಗುಡಿಸಲಿಗೆ ನೀರಿನ ಸಂಪರ್ಕವನ್ನು ನೀಡಿದ್ದರು. ಈ ದಾಖಲೆಯ ಎರಡನೇ ಪುಟದಲ್ಲಿ ಇರುವ ಫೋಟೋ ಸಂಬಂಧಿತ ಸ್ವತ್ತಿನಲ್ಲಿ ಇರುವ ನಮ್ಮ ಶೀಟ್ ಮನೆ ಆಗಿದೆ. ಈ ದಾಖಲೆಯನ್ನು ನಾವು ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಫೋಟೋದಲ್ಲಿ ಪಕ್ಕದಲ್ಲಿ

ಇರುವ ಮನೆ ಕಾಣಿಸುತ್ತಿದೆ ಎಂದರೆ ನಿಜ. ಈ ಫೋಟೋದಲ್ಲಿ ಕಾಣುವ ಶೀಟ್ ಮನೆ ಇರುವ ಜಾಗವು 23 ಅಡಿ x 46 ಅಡಿ ವಿಸ್ತೀರ್ಣ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ವಿಸ್ತೀರ್ಣವನ್ನು ಅಳತೆ ಮಾಡಲು ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿದಲ್ಲಿ ನಮಗೆ ತೊಂದರೆ ಇಲ್ಲ.

20. ನಿ.ಪಿ-33 ರಲ್ಲಿ ಗುರುತಿಸಿರುವ ದಾಖಲೆಯ ಕಾಲಂ 6 ಸಂಪೂರ್ಣವಾಗಿ ಖಾಲಿ ಇದೆ ಎಂದರೆ ನಿಜ. ನಿ.ಪಿ-34 ಮತ್ತು ನಿ.ಪಿ-35 ರಲ್ಲಿ ಗುರುತಿಸಿರುವ ದಾಖಲೆಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಲಾದ ದಾಖಲೆಗಳು ಎಂದರೆ ಸರಿಯಲ್ಲ.

21. ನಿ.ಪಿ-37 ರಲ್ಲಿ ಗುರುತಿಸಿರುವ ದಾಖಲೆಯು ನನ್ನ ತಾಯಿಯವರಿಗೆ ಸಂಬಂಧಿಸಿದ ಚುನಾವಣಾ ಗುರುತಿನ ಚೀಟಿ ಆಗಿದೆ. ಇದರಲ್ಲಿ ಅವರ ವಿಳಾಸ 390, ಕಾವೇರಿನಗರ ಎಂದು ನಮೂದಿಸಲಾಗಿದೆ ಎಂದರೆ ನಿಜ. ಈ ದಾಖಲೆಯನ್ನು 2002 ರಲ್ಲಿ ನೀಡಿರುತ್ತಾರೆ. ನಿ.ಪಿ-38 ರಲ್ಲಿ ಗುರುತಿಸಿರುವ ದಾಖಲೆಯು ನನ್ನ ತಂದೆಗೆ ಸಂಬಂಧಿಸಿದ ಚುನಾವಣಾ ಗುರುತಿನ ಚೀಟಿ ಆಗಿದೆ. ಇದರಲ್ಲಿ ಅವರ ವಿಳಾಸ 464, ಕಾವೇರಿನಗರ ಎಂದು ನಮೂದಿಸಲಾಗಿದೆ ಎಂದರೆ ನಿಜ. ನಿ.ಪಿ-40 ರಲ್ಲಿ ಗುರುತಿಸಿರುವ ದಾಖಲೆಯು ನನ್ನ ತಂದೆಗೆ ಸಂಬಂಧಿಸಿದ ಆಧಾರ್ ಕಾರ್ಡ್ ಆಗಿದೆ. ಇದರಲ್ಲಿ ಅವರ ವಿಳಾಸ ಮಸೀದಿ ರಸ್ತೆ , ನರಸು ಪ್ಯಾಲೇಸ್ ಹತ್ತಿರ, ಕಾವೇರಿನಗರ ಎಂದು ನಮೂದಾಗಿದೆ ಎಂದರೆ ನಿಜ. ನಿ.ಪಿ-39 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ನನ್ನ ತಾಯಿಯ ವಿಳಾಸವನ್ನು ನಂಃ 464, ಮಸೀದಿ ರಸ್ತೆ , ನರಸು ಪ್ಯಾಲೇಸ್ ಹತ್ತಿರ, ಕಾವೇರಿನಗರ ಎಂದು ನಮೂದಿಸಲಾಗಿದೆ ಎಂದರೆ ನಿಜ.

22. ನಿ.ಪಿ-41 ಮತ್ತು ನಿ.ಪಿ-42 ರಲ್ಲಿ ಗುರುತಿಸಿರುವ ದಾಖಲೆಗಳು ನಮ್ಮ ಕುಟುಂಬದ ಪಡಿತರ ಚೀಟಿಗಳಾಗಿವೆ. ಮೊದಲು ಕುಟುಂಬದ ಪಡಿತರ ಚೀಟಿ ನನ್ನ ತಂದೆಯ ಹೆಸರಿನಲ್ಲಿತ್ತು. ನಂತರ ಆ ದಾಖಲೆ ನನ್ನ ತಾಯಿಯ ಹೆಸರಿನಲ್ಲಿ ಆಗಿದೆ. ನನ್ನ ತಂದೆ ಹೆಸರಿನಲ್ಲಿದ್ದ ಕುಟುಂಬದ ಪಡಿತರ ಚೀಟಿಯನ್ನು ತಾಯಿಯ ಹೆಸರಿಗೆ

ಬದಲಾಯಿಸಿರುವ ಕುರಿತಂತೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಿ.ಪಿ-47 ರಲ್ಲಿ ಗುರುತಿಸಿರುವ ದಾಖಲೆಯು ನನ್ನ ಹೆಸರಿನಲ್ಲಿ ಇರುವ ಬಿಪಿಎಲ್ ಕಾರ್ಡ್ ಆಗಿದೆ.

23. ನಾವು ನಿವೇಶನ ಸಂಖ್ಯೆ 120 ರಲ್ಲಿ ವಾಸ ಇರುವ ಬಗ್ಗೆ ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಬಿಟ್ಟು ಬೇರೆ ದಾಖಲೆ ಇಲ್ಲ. ಸರ್ವೆ ನಂಃ 30 ರಲ್ಲಿ ಸರ್ಕಾರವು ಒಟ್ಟು ಎಷ್ಟು ಜನರಿಗೆ ನಿವೇಶನಗಳನ್ನು ಮಂಜೂರು ಮಾಡಿದೆ ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಿ.ಪಿ-5 ರಲ್ಲಿ ಗುರುತಿಸಿರುವ ದಾಖಲೆಯು ಅಸಲು ದಾವಾ ಸಂಖ್ಯೆ 4003/2014 ರ ಪ್ರಕರಣಕ್ಕೆ ಪೂರಕವಾಗಿ ಬರೆಸಿಕೊಂಡ ದಾಖಲೆ ಆಗಿದೆ ಎಂದರೆ ಸುಳ್ಳು.

24. ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಉಪ-ತಹಶೀಲ್ದಾರ್ ರವರು ನ್ಯಾಯಾಲಯದ ಮುಂದೆ ಹಾಜರಾಗಿ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದರು ಎಂದರೆ ನಿಜ. ಸದರಿ ಉಪ-ತಹಶೀಲ್ದಾರ್ ರವರು ಸಲ್ಲಿಸಿದ್ದ ದಾಖಲೆಗಳಲ್ಲಿ ನಮಗೆ 23 ಅಡಿ x 46 ಅಡಿ ವಿಸ್ತೀರ್ಣದ ಜಾಗವನ್ನು ಮಂಜೂರು ಮಾಡಿದ್ದ ಕುರಿತಂತೆ ದಾಖಲೆಯನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಉಪ-ತಹಶೀಲ್ದಾರ್ ರವರು ಸಲ್ಲಿಸಿದ್ದ ಎಲ್ಲಾ ದಾಖಲೆಗಳನ್ನು ಅಸಲು ದಾವಾ ಸಂಖ್ಯೆ 4003/2014 ರಲ್ಲಿ ಗುರುತಿಸಿಕೊಳ್ಳಲಾಗಿತ್ತು ಎಂದರೆ ನಿಜ. ಅಂತಹ ದಾಖಲೆಗಳನ್ನು ಪಡೆದು ಈ ನ್ಯಾಯಾಲಯದಲ್ಲಿ ಹಾಜರುಪಡಿಸಲು ನಮಗೆ ತೊಂದರೆ ಇರಲಿಲ್ಲ.

25. ಅಸಲು ದಾವಾ ಸಂಖ್ಯೆ 4003/2014 ರಲ್ಲಿ ನಾವು ಹಕ್ಕಿನ ಘೋಷಣೆಗಾಗಿ ಪರಿಹಾರ ಕೇಳಬೇಕಿತ್ತು ಎನ್ನುವ ಕಾರಣಕ್ಕಾಗಿ ದಾವಾವನ್ನು ವಜಾಗೊಳಿಸಿದ್ದ ಕಾರಣದಿಂದ ನಾವು ಈ ದಾವಾವನ್ನು ಸಲ್ಲಿಸಿದ್ದೇವೆ ಎಂದರೆ ನಿಜ. ಸರ್ಕಾರದಿಂದ ನಾವು ಕ್ರಯಪತ್ರ ಪಡೆದಿರುವ ಕುರಿತಂತೆ ಘೋಷಣೆಯನ್ನು ಕೇಳಿ ದಾವಾ ಸಲ್ಲಿಸಿದ್ದೇವೆ ಎಂದರೆ ನಿಜ. ನಿ.ಪಿ-5 ರಲ್ಲಿ ಹಾಜರುಪಡಿಸಿರುವ ಸದರಿ

ಕ್ರಯಪತ್ರವು ಸುಳ್ಳು ದಾಖಲೆ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಲ್ಲಿ ಮತ್ತು ನಾನು ದಾವಾಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.